ಕೊಲೆಯನ್ನು ಯಾರು ಮಾಡುತ್ತಿದ್ದಾರೆ, ಅಂಥವರನ್ನು ಗುಂಡಿಕ್ಕಿ ಕೊಲ್ಲಬೇಕು. ಇನ್ನತ್ತಿನ ದಿನಸ ನರ ದಕ್ಷಿಣೆಯ ಪಿಡುಗು ಬೃಹದಾಕಾರವಾಗಿ ಬೆಳೆಯುತ್ತಿದೆ. ಹೆಣ್ಣು ಮಕ್ಕಳು ಮೆರವಣಿಗೆ ನಡೆಸಿದ್ದಾರೆ ನಗರ ಸಭಾ ಉಪಾಧ್ಯಕ್ಷೆಯವರು ಮತ್ತು ಇತರ ಸಂಘ ಸಂಸ್ಥೆಗಳವರೆಲ್ಲರೂ ಸೇರಿ ಮೆರವಣಿಗೆ ನಡೆಸಿದ್ದಾರೆ. ಇದೇ ರೀತಿ ಮುಂದುವರಿದರೆ ಸರ್ಕಾರದ ಮೇಲೂ ಕೂಡ ಉಗ್ರವಾದ ಹೋರಾಟಕ್ಕೆ ತಯಾರಾಗುತ್ತಾರೆ. ಇದನ್ನು ಮಾನ್ಯ ಸಚಿವರು ಪೋಲೀಸ್ ಇಲಾಖೆಯಿಂದ ಸರಿಯಾದ ತನಿಖೆ ನಡೆಸಿ ಆದಕ್ಕೆ ಸಂಬಂಧಪಟ್ಟವರೆಲ್ಲರಿಗೂ ಕೂಡ ಶಿಕ್ಷೆ ಆಗುವಂತೆ ಕ್ರಮ ಕೈಗೊಳ್ಳಬೇಕು, ಮಹಿಳೆಯರಿಗೆ ಆಗತಕ್ಕ ಅನ್ಯಾಯವನ್ನು ಖಂಡಿಸುತ್ತಾ ಇದನ್ನು ತಪ್ಪಿಸುವುದಕ್ಕೆ ಒಂದು ಕಾಯಿದೆಯನ್ನು ತರಬೇಕೆಂದು ಈ ಸದನದ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಜಿಗಜಿಣಗಿ ರಮೇಶ್ ಚಂದಪ್ಪ (ಗೃಹ ಇಲಾಖೆಯ ಸಚಿವರು) --ಮಾನ್ಯ ಸಭಾಧ್ಯಕ್ಷರೇ, ಯಶೋದಮ್ಮನ ಕೊಲೆಯ ಪ್ರಕರಣವನ್ನು ಸದನದಲ್ಲಿ ಸರ್ಕಾರದ ಗಮನಕ್ಕೆ ತಂದಿದಾರೆ. ಈಗಾಗಲೇ ದಾವಣಗೆರೆಯ ಪೋಲೀಸ್ ಸ್ಟೇಷನ್‌ನಲ್ಲಿ ಈ ಕೇಸ್ ರಿಜಿಸ್ಟರ್ ಆಗಿದ್ದು ಆರೋಪಿಯನ್ನು ಅರೆಸ್ಟ್ ಮಾಡಿ ಜ್ಯುಡಿಸಿಯಲ್ ಕಸ್ಟಡಿಗೆ ಒಪ್ಪಿಸಿದ್ದೇವೆ. ಕಾನೂನು ಪ್ರಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಆ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ತಿಳಿಸುತ್ತೇನೆ.

ಶ್ರೀ ಪಂಪಾಪತಿ.—ಅಧ್ಯಕ್ಷರೇ, ಆಕೆಗೆ 5 ವರ್ಷದ ಮತ್ತು 3 ವರ್ಷದ ಮಕ್ಕಳಿದ್ದಾರೆ. ಆ ಮಕ್ಕಳಿಗೆ ಏನಾದರೂ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ, ಮತ್ತು ಆ ಹೆಣ್ಣು ಮಗಳು ಬರೆದಿರತಕ್ಕ ಎಲ್ಲಾ ಪತ್ರಗಳನ್ನು ತಮಗೆ ಈಗ ಕಳುಹಿಸಿಕೊಡುತ್ತೇನೆ.

(vii) ಹುನ್ನುಬಾದ್ ತಾಲ್ಲೂಕಿನ ನರಸರೆಡ್ಡಿ ಎಂಬುನರ ಹೆಂಡತಿ ಶ್ರೀಮತಿ ಜಗದಾಂಬ ಎಂಬುವರ ಕೊಲೆಯ ಬಗ್ಗೆ

ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್).—ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಹಿರಿಯ ಸದಸ್ಯರಾದ ಪಂಪಾಪತಿಯವರು ಹೇಳಿದಹಾಗೆ ದಾವಣಗೆರೆಯಲ್ಲಿ ಯಾವ ಒಂದು ಹೆಣ್ಣುಮಗಳ ಕೊಲೆ ಪ್ರಕರಣ ನಡೆಯಿತು ಅದೇ ರೀತಿ ಬೀದರ್ ಜಿಲ್ಲೆಯ ಹುನ್ನಾಬಾದ್ ತಾಲ್ಲೂಕ್ ಮೇಗಲ್ ಬೀದಂ ಗ್ರಾಮದಲ್ಲಿ ಜಗದಾಂಬ ಎಂಬ 21 ವರ್ಷದ ಹುಡುಗಿಯನ್ನು ವರದಕ್ಷಿಣೆಯ ಸಲುವಾಗಿ ಕೊಲೆ ಮಾಡಲಾಗಿದೆ. ಇದರ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯಬಯಸುತ್ತೇನೆ. ಇದಲ್ಲದೇ ನಮ್ಮ ಜಿಲ್ಲೆಯಲ್ಲಿ ಒಂದು ವರ್ಷದಲ್ಲಿ ಇದೇರೀತಿ 6 ಪ್ರಕರಣಗಳು ಆಗಿವೆ, ಅದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಜಿಗಜಿಂಗಿ ರಮೇಶ್ ಚಂದ್ರಪ್ಪ.—ಅಧ್ಯಕ್ಷರೇ, ಸದಸ್ಯರು ಈ ವಿಚಾರದಲ್ಲಿ ಸರ್ಕಾರದ ಗಮನವನ್ನು ಸೆಳೆದಿದಾರೆ. ಈ ಕೊಲೆ ಆಗಿರತಕ್ಕ ಘಟನೆಯ ಬಗ್ಗೆ ಸವಿಸ್ತಾರವಾದ ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ. ಕಾಯಿದೆ ಪ್ರಕಾರ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೇನೆ.

Papers Laid On The Table

SRI. A. LAKSHMISAGAR (Minister for Law and Parlimentary Affairs, Housing and Public Grievances).—Sir, I beg to lay.

"The Karnataka Sales Tax (Amendment) Rules, 1984 as required under section 39 of the Karnataka Sales Tax Act, 1957".

MR. SPEAKER --PAPER LAID.

ಗಮನ ಸೆಳೆಯುವ ಸೂಚನೆ

(i) ಕೊಟ್ಟೂರಿನಲ್ಲಿ ಬೆಂಕಿ ಬಿದ್ದು ಹತ್ತಿ ಅಂಗಡಿ ಸುಟ್ಟುಹೋದ ಬಗ್ಗೆ :

ಶ್ರೀ ಕೆ ಚನ್ನಬಸವನನಗೌಡ (ಕೂಡ್ಲಿಗಿ).—ಆಕಸ್ಮಿಕ ಬೆಂಕಿಯಿಂದ ಬಳ್ಳಾರಿ ಜಿಲ್ಲೆಯಲ್ಲಿರುವ ಕೊಟ್ಟೂರು ಗ್ರಾಮದಲ್ಲಿ ಅಂಡಿಗೆ ಹತ್ತಿ ಸುಟ್ಟಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಡಿ. ಎಲ್. ಪಾಟೀಲ್ (ಕಂದಾಯ ಮಂತ್ರಿಗಳು) —ದಿನಾಂಕ 6ನೇ ಫೆಬ್ರವರಿ 1984 ರಂದು ಮುಂಜಾನೆ 10-30 ಗಂಟೆಗೆ ಬೆಗಹೇರಿ ಜಿನ್ನಿಂಗ ಫ್ಯಾಕ್ಟರಿ, ಕೂಡಲಿ ತಾಲೂಕಿನಲ್ಲಿರುವ ಕೊಟ್ಟೂರು ಗ್ರಾಮದಲ್ಲಿ ಆಕಸ್ಮಿಕ ಬೆಂಕಿ ಅನಾಹುತು ಘಟಿಸಿತು. ಯಾವುದೇ ಪ್ರಕಾರದ ಪ್ರಾಣ ಹಾನಿಯು, ಸಂಭವಿಸಿರುವುಲ್ಲ, ಆದರೆ ಈ ಬೆಂಕಿ ಅನಾಹುತದಲ್ಲಿ ರೂ 10-00 ಲಕ್ಷದಿಂದ ರೂ. 25-00 ಲಕ್ಷ ಬೆಲೆ ಹತ್ತಿ ಅಂದಿಗೆ ಹೋಗಿರುತ್ತದೆ. ಪರಿಹಾರವನ್ನು ಪ್ರಸಕ್ತ ನಿಯಮಗಳನ್ವಯ ಕೊಡಲಾಗುವುದು

ಶ್ರೀ ಚನ್ನಬಸವಗೌಡ.—ಅಧ್ಯಕ್ಷರೇ, ಸುಮಾರು 414 ರೈತರು ಬೆಳೆದ ಅಂಡಿಗೆ ಹತ್ತಿಯನ್ನು ಜಿನ್ನಿಂಗ್ ಫ್ಯಾಕ್ಟರಿಗೆ ಮಾರಾಟಕ್ಕೆ ತಂದಿದ್ದರು. ಅಲ್ಲಿ ಬೆಂಕಿ ಸಂಭವಿಸಿ ಅಂದಿಗೆ ಹತ್ತಿಯೆಲ್ಲಾ ಸುಟ್ಟು ಹೋಗಿದೆ ಸರ್ಕಾರದ ಪ್ರಕಾರ ಇದರ ನಷ್ಟವನ್ನು ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಅವರು ಸುಮಾರು 3.39 750 ರೂಪಾಯಿಗಳು ಎಂದು ಅಂದಾಜು ಮಾಡಿದ್ದಾರೆ. ಫ್ಯಾಕ್ಟರಿಯಲ್ಲಿ ಬೆಂಕಿ ಸಂಭವಿಸಿದ್ದರಿಂದಾಗಿ ರೈತರಿಗೆ ದೊಡ್ಡ ಅನಾಹುತವಾಗಿದೆ. ಇದಕ್ಕೆ ಕಾರಣ ಏನು ಎಂಬುದನ್ನು ತಿಳಿಸುವುದು ?

ಶ್ರೀ ವಿ ಎಲ್. ಪಾಟೀಲ್.—ಯಾವ ಕಾರಣದಿಂದ ಸುಟ್ಟು ಹೋಗಿದೆ ಎಂಬುದು ತಿಳಿದಿಲ್ಲ ಬಹುಶಃ ಆಕ್ಸಿಡೆಂಟ್ ಫೈರ್ ಎಂದು ಗೊತ್ತಾಗಿದೆ.

ಶ್ರೀ ಕೆ. ಚನ್ನಗೌಡ —ಈ ಪಾರ್ಟ್ ಸರ್ಕೂಟ್‌ನಿಂದ ಸಂಭವಿಸಿದ ಅನಾಹುತಕ್ಕೆ ರೈತರಿಗೇ ನಾದರೂ ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಅಧ್ಯಕ್ಷರು —ಉತ್ತರದಲ್ಲಿ ಹೇಳಿದ್ದಾರೆ ನೋಡಿ.

ಒಬ್ಬ ಮಾನ್ಯ ಸದಸ್ಯರು.—ಇಷ್ಟು ದೊಡ್ಡ ಅನಾಹುತವಾಗಿ ಲಕ್ಷಾಂತರ ರೂಪಾಯಿಗಳ ಹತ್ತಿ ಸುಟ್ಟು ಹೋಗಿದೆ. ಇವರಿಗೆ ಏನಾದರೂ ಮಾಡುತ್ತೀರಾ ಮತ್ತು ಕೊಟ್ಟೂರಿನಲ್ಲಿ ಎ ಪಿ ಎಂ ಸಿ ಯಾರ್ಡ್‌ನಲ್ಲಿ ಹತ್ತಿಯ ವ್ಯಾಪಾರ ಜಾಸ್ತಿಯಾಗಿದೆ. ಅಲ್ಲಿ ಒಂದು ಫೈರ್ ಸ್ಟೇಷನ್ ಓಪನ್ ಮಾಡುತ್ತೀರಾ ಏಕೆಂದರೆ ಕಳೆದ ನವೆಂಬರ್‌ನಿಂದ ಫೆಬ್ರವರಿ ತಿಂಗಳವರೆಗೆ ಮೂರು ಸಾರಿ ಇಂಥ ಬೆಂಕಿ ಅಪಘಾತವಾಗಿದೆ ಆದ್ದರಿಂದ ಅಲ್ಲಿ ಒಂದು ಫೈರ್ ಸ್ಟೇಷನ್ ಓಪನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಲ್. ಪಾಟೀಲ್.—ಆಗಲೇ ಹೇಳಿದ್ದೇನೆ, ಪರಿಹಾರ ಕೊಡುವುದಕ್ಕೆ ಪರಿಶೀಲನೆ ಮಾಡುತ್ತೇನೆ ಎಂದು

IV. LEGILATIVE BUSINESS

Karnataka Appropuation Bill 1984
heave to introduce

MR. SPEAKER--. I have received the recommendation of the Governor for introduction and consideration of Karnataka Appropriation Bill, 1984 Hon'ble Law Minister to move the motion.

SRI A LAKSHMISAGAR--. (Minister For Law & Parliamentary Affairs): Sir, I beg to move :

"That leave be granted to introduce the Karnataka Appropriation Bill, 1984".

MR. SPEAKER.-- Motion moved. The question is :

"That leave be granted to introduce the Karnataka Appropriation Bill, 1984"

Motion was adopted and leave was granted.

MR. SPEAKER.-- Hon'ble Minister may introduce the Bill

SRI A. LAKSHMISAGAR -- Sir, I introduce :

"The Karnataka Appropriation Bill, 1984".

MR. SPEAKER.-- The Bill is introduced.